ಇ) ಪ್ರಸ್ತಾವನೆ ಸಲ್ಲಿಸಿದ್ದರೆ ಹಣ ಬಿಡುಗಡೆ ಮಾಡುವಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು,

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಹುಬ್ಬಳ್ಳಿ – ಧಾರವಾಡ ನಗರಪಾಲಿಕೆಯಲ್ಲಿನ ವಿತರಣಾ ವ್ಯವಸ್ಥೆಯನ್ನು ಉತ್ತಮಗೊಳಿಸಲು ಅಂದಾಜು ವೆಚ್ಚ 50 25 ಕೋಟಿ ರೂ ಗಳಲ್ಲಿ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆಗೆ ಸರ್ಕಾರವು ಈಗಾಗಲೇ ಅನುಮೋದನೆಯನ್ನು ನೀಡಿದೆ ಈ ಕಾಮಗಾರಿಯನ್ನು ಕೈಗೊಳ್ಳಲು ಮತ್ತು ಇದಕ್ಕೆ ಬೇಕಾಗುವ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ

ಈ) 50 00 ಕೋಟಿ ರೂಪಾಯಿ ಬಿಡುಗಡೆಯ ಪ್ರಸ್ತಾವನೆಗೆ ಅನುಮೋದನೆ ನೀಡಿ ಹಣ ಯಾವಾಗ ಬಿಡುಗಡೆ ಮಾಡಲಾಗುವುದು,

ಮೇಲಿನಂತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1115(1546)**

ಸದಸ್ಯರ ಹೆಸರು **ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ)**

ಉತ್ತರಿಸುವ ಸಚಿವರು **ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಹುಬ್ಬಳ್ಳಿ – ಧಾರವಾಡ ಮಹಾನಗರದ ಮಧ್ಯದಲ್ಲಿರುವ ರಸ್ತೆಯನ್ನು ಚತುಷ್ಪತ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆಯೇ,

ಇಲ್ಲ

ಆ) ಚತುಷ್ಪತ ರಸ್ತೆಯನ್ನಾಗಿಸುವ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆಯೇ,

ಇಲ್ಲ

ಇ) ಚತುಷ್ಪತ ರಸ್ತೆ ಅಭಿವೃದ್ಧಿಗೆ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ನಿಧಿ ಎಷ್ಟೆಷ್ಟು,

ಸದರಿ ರಸ್ತೆಯ ಅಭಿವೃದ್ಧಿಯನ್ನು 2006–07ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆ ಅಡಿ ಹೊಸೂರು ಕ್ರಾಸ್ (ಕಿಮೀ 408 80) ನಿಂದ ಉಣಕಲ್ ಕ್ರಾಸ್‌ವರೆಗೆ (ಕಿಮೀ 411 00) ಹಾಲಿ ಇರುವ ರಸ್ತೆಯನ್ನು ಚತುಷ್ಪತ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ರೂ 1 00 ಕೋಟಿ ಮಂಜೂರಾಗಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ

ಈ) ಇಲ್ಲವಾದಲ್ಲಿ ಕಾರಣಗಳೇನು, ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು?

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಯೋಜನಾ ವರದಿಯನ್ನು ತಯಾರಿಸುವ ಪ್ರಕ್ರಿಯೇ ಪ್ರಗತಿಯಲ್ಲಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1117(1484)**
ಸದಸ್ಯರ ಹೆಸರು	**ಶ್ರೀ ಐವಾನ್ ನಿಗ್ಲಿ (ನಾಮಾಂಕಿತ)**
ಉತ್ತರಿಸುವ ಸಚಿವರು	**ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)**

ಅ) ಸರ್ಕಾರವು ಹೊಸ ವೋಲ್ವೊ ವಾಹನಗಳನ್ನು ಖರೀದಿಸುವ ಪ್ರಸ್ತಾವನೆ ಇದೆಯೇ, ಇದ್ದಲ್ಲಿ ಎಷ್ಟು,

ಹೌದು 2007–08ನೇ ಸಾಲಿನಲ್ಲಿ ಒಟ್ಟು 70 ವಾಹನಗಳನ್ನು ಖರೀದಿಸುವ ಯೋಜನೆ ಹೊಂದಿರುತ್ತದೆ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳು ಹೊಂದಿರುವ ವೋಲ್ವೋ ವಾಹನಗಳ ಸಂಖ್ಯೆ ಎಷ್ಟು,

KSRTC 150
BMTC 48
ಒಟ್ಟು 198

ಇ) ಈ ವಾಹನಗಳು ಲಾಭದಲ್ಲಿ ಅದವಾ ನಷ್ಟದಲ್ಲಿ ಓಡುತ್ತಿದೆಯೇ, (ಕಳೆದ 12 ತಿಂಗಳ ಲಾಭ ಅಥವಾ ನಷ್ಟದ ವಿವರವನ್ನು ನಮೂದಿಸುವುದು)

ಕಳೆದ 12 ತಿಂಗಳಿಂದ ಗಳಿಸಿರುವ ಲಾಭ/ನಷ್ಟ ದ ವಿವರ ಕೆಳಕಂಡಂತಿದೆ

1) KSRTC ರೂ 7 12ಕೋಟಿ ಲಾಭ ಗಳಿಸಿರುತ್ತದೆ
2) BMTC ರೂ 1 89ಕೋಟಿ ನಷ್ಟವಾಗಿರುತ್ತದೆ